**Prajavani**

**Date:** February 04, 2016 **Page No.** 03

**Edition:** Mysuru **Language: Kannada**

# ನವೋದ್ಯಮ: ಬದಲಾವಣೆ ಎದುರಿಸಿ

## ಎನ್‌.ಆರ್‌. ಗ್ರೂಪ್‌ ಸಂಸ್ಥಾಪಕ ಅರ್ಜುನ್‌ ಎಂ. ರಂಗ ಅಭಿಮತ

ಪ್ರಜಾವಾಣಿ ವಾರ್ತೆ

ಮೈಸೂರು: ಇಂದು ಸ್ಪರ್ಧೆ ಸಾಮಾನ್ಯವಾಗಿದೆ. ಈ ಕಾರಣದಿಂದ ಮಾರುಕಟ್ಟೆ ಮತ್ತು ಸಾಮರ್ಥ್ಯ ಬದಲಾವಣೆಗೆ ಹೊಂದಿಕೊಳ್ಳುವ ವೇಗ ಅಗತ್ಯವಾಗಿದ್ದು, ಉದ್ಯಮ ಆರಂಭಿಸುವವರು ಇವುಗಳನ್ನು ಎದುರಿಸಲು ಸಿದ್ಧರಾಗಬೇಕು ಎಂದು ಎನ್‌.ಆರ್‌ ಗ್ರೂಪ್‌ ವ್ಯವಸ್ಥಾಪಕ ಪಾಲುದಾರ ಅರ್ಜುನ್‌ ಎಂ. ರಂಗ ಅಭಿಪ್ರಾಯಪಟ್ಟರು.

ಮೈಸೂರಿನ ಎಸ್‌ಡಿಎಂಐಎಂಡಿ ವತಿಯಿಂದ ಬುಧವಾರ ಆಯೋಜಿಸಿದ್ದ ಉದ್ಯಮಶೀಲತೆ ಕುರಿತ 'ಸ್ಟಾರ್ಟ್‌ಅಪ್‌' ಚರ್ಚಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ಉದ್ಯಮ ಆರಂಭಿಸುವ ಮುನ್ನ ಅದರ ಬಗ್ಗೆ ಜ್ಞಾನ ಅವಶ್ಯ.

> **ನಮ್ಮ ಆಲೋಚನೆ ದೊಡ್ಡದಾಗಿರಬೇಕು. ಆದರೆ, ಅದರ ಅನುಷ್ಠಾನ ಮಾತ್ರ ಚಿಕ್ಕದಾಗಿರಬೇಕು. ಆಗ ಮಾತ್ರ ಯಶಸ್ಸು ಸಾಧ್ಯ**
>
> **ಅರ್ಜುನ್‌ ಎಂ. ರಂಗ**
> ಎನ್‌.ಆರ್‌ ಗ್ರೂಪ್‌ ವ್ಯವಸ್ಥಾಪಕ ಪಾಲುದಾರ

ಅನುಭವ, ಜ್ಞಾನ ಇಲ್ಲದೆ ಯಾವುದೇ ಕೆಲಸದಲ್ಲೂ ಯಶಸ್ಸನ್ನು ಸಾಧಿಸಲು ಅಸಾಧ್ಯ. ಒಬ್ಬ ಉದ್ಯಮಿ ಗ್ರಾಹಕರ ಮನಸ್ಸನ್ನು ಅರ್ಥಮಾಡಿಕೊಂಡು ತನ್ನ ಉದ್ಯಮ ನಿರ್ವಹಿಸಿದಾಗ ಮಾತ್ರ ಬೆಳವಣಿಗೆ ಹೊಂದಲು ಸಾಧ್ಯ ಎಂದರು.

ಆಧುನಿಕ ಉದ್ಯಮ ಜಗತ್ತಿನಲ್ಲಿ ಫ್ಯಾಷನ್‌ ಮಹತ್ವದ ಸ್ಥಾನ ಪಡೆದಿದೆ. ಪ್ರತಿ ಉದ್ಯಮವೂ ಫ್ಯಾಷನ್‌ಅನ್ನು ಅಳವಡಿಸಿಕೊಳ್ಳಬೇಕು. 'ಯಾವುದು ನಮ್ಮನ್ನು ಸೆಳೆಯುತ್ತದೆಯೋ; ನಾವು ಏನನ್ನು ಮಾಡುತ್ತೇವೆಯೋ ಅದೇ ಫ್ಯಾಷನ್‌'. ನಮ್ಮ ಆಲೋಚನೆ ಮತ್ತು ಚಟುವಟಿಕೆ ಭವಿಷ್ಯದ ವ್ಯವಹಾರಕ್ಕೆ ಚಾಲನಾ ಶಕ್ತಿಯಾಗಿರುತ್ತದೆ ಎಂದು ಹೇಳಿದರು.

ಹೊಸ ಅವಕಾಶಗಳನ್ನು ಶೋಧಿಸಬೇಕಿದೆ. ದಿನ ಕಳೆದಂತೆ ತಂತ್ರಜ್ಞಾನವೂ ಕಠಿಣವಾಗುತ್ತಿದೆ. ಭಾರತದಲ್ಲಿ ಬೌದ್ಧಿಕ ಆಸ್ತಿಯ ರಕ್ಷಣೆಗೆ ಉತ್ತಮ ವಾತಾವರಣವಿದೆ. ಹಕ್ಕುಸ್ವಾಮ್ಯವನ್ನು ಕದಿಯಬಹುದೇ ಹೊರತು, ನಮ್ಮ ಆಲೋಚನೆಗಳನ್ನು ಕದಿಯಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಉದ್ಯಮಗಳು ಔದ್ಯೋಗಿಕ ನಿರ್ವಹಣೆ ಕಾಪಾಡುವ ಜತೆಗೆ ಸಾಮಾಜಿಕ ಹೊಣೆಗಾರಿಕೆಯನ್ನೂ ಹೊಂದಿರಬೇಕು. ಉದ್ಯಮ ಯಶಸ್ವಿಯಾಗಬೇಕಾದರೆ ಉದ್ಯಮಿ ಸವಾಲುಗಳನ್ನು ಪ್ರೀತಿಸಬೇಕು. ಅದರ ಜತೆಗೆ ಕನಸು ನನಸಾಗಿಸುವ ಧೈರ್ಯ, ಬಿಟ್ಟು ಕೊಡದಿರುವ ಮನೋಭಾವ, ಜಾಗತಿಕ ಗುರಿಯ ಜತೆಗೆ ಹಣಕಾಸಿನ ಶಿಸ್ತು ಬಹಳ ಮುಖ್ಯವಾಗಿರುತ್ತದೆ ಎಂದು ಅವರು ಮಾಹಿತಿ ನೀಡಿದರು.

1945ರಲ್ಲಿ ರಂಗರಾವ್‌ ಅಂಡ್‌ ಸನ್ಸ್‌ನ ಯಶೋಗಾಥೆಯನ್ನು ಅವರು ಬಿಚ್ಚಿಟ್ಟರು.

ಸಂಸ್ಥೆಯ ನಿರ್ದೇಶಕ ಡಾ.ಎನ್‌.ಆರ್‌. ಪರಶುರಾಮ್‌, ಉಪ ನಿರ್ದೇಶಕಿ ಡಾ.ಎಚ್‌. ಗಾಯತ್ರಿ, ಪ್ರಾಧ್ಯಾಪಕ ಡಾ.ಎಂ.ಆರ್‌. ಸುರೇಶ್‌ ಇದ್ದರು.



ಮೈಸೂರಿನ ಎಸ್‌ಡಿಎಂಐಎಂಡಿ ಸಂಸ್ಥೆ ವತಿಯಿಂದ ಬುಧವಾರ ಆಯೋಜಿಸಿದ್ದ ಉದ್ಯಮಶೀಲತೆ ಕುರಿತ 'ಸ್ಟಾರ್ಟ್‌ಅಪ್‌ ಚರ್ಚಾ' ಕಾರ್ಯಕ್ರಮದಲ್ಲಿ ಎನ್‌.ಆರ್‌. ಸಂಸ್ಥೆಯ ಅರ್ಜುನ್‌ ಎಂ. ರಂಗ ಮಾತನಾಡಿದರು (ಎಡಚಿತ್ರ). ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಮತ್ತು ಗಣ್ಯರು